ದಿನಾಂಕಃ **23.03.2023**
ಓ.ಎಸ್ ಃ **48/2015**
ಪಿ ಡಬ್ಲ್ಯೂ ಃ **1**

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಃ 1, 4, 5, 8, 9, 11 ನೇ ಪ್ರತಿವಾದಿಗಳ ಪರ ವಕೀಲರಾದ ಶ್ರೀ ಎಎಸ್ ರವರಿಂದಃ**

ನಾನು ಸರ್ಕಾರಿ ಉದ್ಯೋಗದಲ್ಲಿ ಇದ್ದೇನೆ ಎಂದರೆ ಸರಿ. ನಾನು ಸರ್ಕಾರಿ ಉದ್ಯೋಗಕ್ಕೆ ಸೇರಿಕೊಂಡ ಸಮಯದಲ್ಲಿ ಹಾಜರು ಮಾಡಿದ್ದ ಶಾಲಾ ದಾಖಲಾತಿಗಳನ್ನು ಮತ್ತು ಜನ್ಮ ದಿನಾಂಕದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ತೊಂದರೆ ಇರುವುದಿಲ್ಲ. ದಿ ಃ 01.06.1972 ರ ಮುಂಚಿತವಾಗಿ ಕೌಟುಂಬಿಕ ವ್ಯವಹಾರದ ಬಗ್ಗೆ ದಾಖಲೆಗಳನ್ನು ಹಾಜರು ಮಾಡಲು ತೊಂದರೆ ಇದೆಯಾ ಎಂದರೆ ತೊಂದರೆ ಇರುವುದಿಲ್ಲ. ಸಾಕ್ಷಿಗೆ ಒಂದು ಕ್ರಯ ಪತ್ರದ ದೃಢೀಕೃತ ನಕಲನ್ನುತೋರಿಸಲಾಗಿ ಅದು ನನ್ನ ತಂದೆಯು ರಾಮಶೆಟ್ಟಿ ರವರಿಗೆ ಮಾರಾಟ ಮಾಡಿದ ಬಗ್ಗೆ ದಾಖಲೆ ಎಂದರೆ ಸಾಕ್ಷಿಯು ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ದಾಸ ಶೆಟ್ಟಿ ಮಗ ದ್ಯಾಪಶೆಟ್ಟಿ ನನ್ನ ತಂದೆ ಎಂದರೆ ಸರಿ. 1 ನೇ ಪ್ರತಿವಾದಿಯ ಗಂಡನ ಹೆಸರು ಕೆ. ರಾಮಶೆಟ್ಟಿ ಎಂದರೆ ಸರಿ. ಕೆ. ರಾಮಶೆಟ್ಟಿಯವರು ಕೆಂಪಶೆಟ್ಟಿಯವರ ಮಗ ಎಂದರೆ ಸಾಕ್ಷಿಯು ಕೆ ರಾಮಶೆಟ್ಟಿಯ ತಂದೆಗೆ ಎರಡು ಹೆಸರು ಇದ್ದು ಕೆಂಪಶೆಟ್ಟಿ ಮತ್ತು ಯಾದಿಕೆಂಪಶೆಟ್ಟಿ ಎಂದು ಇದೆ ಎಂದು ನುಡಿಯುತ್ತಾರೆ. ಕೆಂಪಶೆಟ್ಟಿ ಉಃ ಯಾದಿಕೆಂಪಶೆಟ್ಟಿ ನನ್ನ ತಾತ ದಾಸಶೆಟ್ಟಿಯವರ ಸಹೋದರ ಎಂದರೆ ಸರಿ. 16 ನೇ ಪ್ರತಿವಾದಿಯ ಗಂಡನ ಹೆಸರು ದಾಸಶೆಟ್ಟಿ ಎಂದರೆ ಸರಿ. ದಾಸಶೆಟ್ಟಿಯವರ ತಂದೆ ಮರಿಶೆಟ್ಟಿ ಉಃ ಮರಯ್ಯರವರು ನನ್ನ ತಾತನ ಸಹೋದರ ಎಂದರೆ ಸರಿ. ಸರ್ವೆ ನಂಃ 391/1 ರಲ್ಲಿ 13 ಗುಂಟೆಯನ್ನು ಕೆಂಪಶೆಟ್ಟಿಯ ಮಕ್ಕಳು ಕೆ ರಾಮಶೆಟ್ಟಿ, ಚಿಕ್ಕಕೆಂಪಯ್ಯ ಮತ್ತು 3 ನೇ ದಾಸಶೆಟ್ಟಿ ರವರಿಂದ ಮರಿಶೆಟ್ಟಿ ಉಃ ಮರಯ್ಯ ರವರ ಮಗ ದಾಸಶೆಟ್ಟಿಯವರು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಕ್ರಯ ಪತ್ರವನ್ನು ದಾವೆ ಹಾಕುವ ಕಾಲಕ್ಕೆ ನೋಡಿರುತ್ತೇನೆ. ಈ ಬಗ್ಗೆ ವಾದ ಪತ್ರ ತಯಾರು ಮಾಡುವಾಗ ನಮ್ಮ ವಕೀಲರಿಗೆ ಹೇಳಿರುತ್ತೇನೆ. ದಿಃ 16.01.1964 ರಲ್ಲಿ ಸದರಿ ಕ್ರಯಪತ್ರ ನೊಂದಣಿಯಾಗಿರುತ್ತದೆ ಎಂದರೆ ಸರಿ. ದಾವಾ ಎ ಷೆಡ್ಯೂಲ್ ಸ್ವತ್ತು ಕೆಂಪಶೆಟ್ಟಿ ರವರ

ಮಕ್ಕಳಿಗೆ ಹೇಗೆ ಬಂದಿರುತ್ತದೆ ಎಂದರೆ ಸಾಕ್ಷಿಯು ಅದು ಪಿತ್ರಾರ್ಜಿತ ಆಸ್ತಿಯಾಗಿದ್ದು ಅವರ ಹೆಸರಿನಲ್ಲಿ ಆರ್.ಟಿ.ಸಿ ಮತ್ತು ಎಂ.ಆರ್. ಬರುತ್ತಿತ್ತು ಎಂದು ನುಡಿಯುತ್ತಾರೆ. **1964** ರ ಪೂರ್ವದ ಯಾವುದೇ ದಾಖಲಾತಿಗಳನ್ನು ಆರ್.ಟಿ.ಸಿ ಅಥವಾ ಎಂ.ಆರ್. ಗಳನ್ನು ಹಾಜರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಪುನಃ **1964** ರ ಹಿಂದಕ್ಕೆ ದಾವಾ ಎ ಷೆಡ್ಯೂಲ್ ಆಸ್ತಿಗೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರು ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. **1964** ರ ಹಿಂದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ನಾನು ನೋಡಿರುವುದಿಲ್ಲದೇ ಇರುವ ಕಾರಣ ಯಾರು ಯಾರಿಗೆಯಾವ ಆಸ್ತಿ ಹಂಚಿಕೆಯಾಗಿತ್ತು ಮತ್ತು ಹೇಗೆ ಸ್ವಾಧೀನದಲ್ಲಿದ್ದರು ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿಯು **2011** ರಲ್ಲಿ ನನ್ನ ತಾತಂದಿರು ವಿಭಾಗ ಆಗಿರುವ ಬಗ್ಗೆ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ಯಾರ ನಡುವೆ ವಿಭಾಗ ಆಗಿದೆ ಮತ್ತು ಯಾರ ಜೀವಿತಾಧಿಯಲ್ಲಿ ವಿಭಾಗ ಆಗಿರುತ್ತದೆ ಎಂದರೆ ಕೆ.ರಾಮಶೆಟ್ಟಿ ರವರು ಇದ್ದಾಗ ವಿಭಾಗ ಆಗಿದೆ. ಕೆ.ರಾಮಶೆಟ್ಟಿ ರವರ ಹೆಸರಿಗೆ ಯಾವ ಇಸವಿಯಲ್ಲಿ ಖಾತೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಹೆಸರಿಗೆ ಯಾವ ವರ್ಷದಲ್ಲಿ ಖಾತೆಯಾಗಿರುತ್ತದೆ ಎಂದರೆ ಸಾಕ್ಷಿಯು ನನ್ನ ತಂದೆಹೆಸರಿಗೆ ಯಾವುದೇ ಖಾತೆಯಾಗಿಲ್ಲ ಎಂದು ನುಡಿಯುತ್ತಾರೆ. ಮರಯ್ಯ ಉಃ ಮರಿಶೆಟ್ಟಿ ರವರ ಮಗ ದಾಸಶೆಟ್ಟಿಯವರ ಹೆಸರಿಗೆ ಯಾವಾಗ ಖಾತೆಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ ಆದರೆ ಕ್ರಯ ಪತ್ರ ನೋಡಿರುತ್ತೇನೆ. ಕೆಂಪಶೆಟ್ಟಿಯ ಭಾಗಕ್ಕೆ ಬಂದ ಆಸ್ತಿಗಳನ್ನು ಅವರ ಮಗ ಕೆ ರಾಮಶೆಟ್ಟಿಯವರು ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಕೆಂಪಶೆಟ್ಟಿ ರವರಿಗೆ ಅವರ ಭಾಗಕ್ಕೆ ಬಂದಿರಲಿಲ್ಲ ಹೇಗೆ ಖಾತೆ ಮಾಡಿಕೊಂಡರು ಎಂದು ನುಡಿಯುತ್ತಾರೆ. ಅದು ತಪ್ಪಾಗಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸ್ವತ್ತನ್ನು ಮಾರಾಟ ಮಾಡಬೇಕಾದರೆ ಅವರವರ ಹೆಸರಿಗೆ ಎಂ.ಆರ್ ಮತ್ತು ಆರ್.ಟಿ.ಸಿ ಗಳು ಬಂದ ನಂತರ ಮಾರಾಟ ಮಾಡಬೇಕು ಎಂದರೆ ಸರಿ.

**2.** ನನ್ನ ತಂದೆ ದ್ಯಾಪಶೆಟ್ಟಿ, ಕೆಂಪಶೆಟ್ಟಿ ರವರ ಮಗ ಕೆ ರಾಮಶೆಟ್ಟಿ ಮತ್ತು ಮರಿಶೆಟ್ಟಿ ಉ ಃ ಮರಯ್ಯ ರವರ ಮಗ ದಾಸಶೆಟ್ಟಿ ರವರು ಅವರ ತಂದೆಯವರ ವಿಭಾಗದಂತೆ **1964** ರ ಹಿಂದೆ ಖಾತೆ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಅವರ ತಂದೆ ಹೆಸರಿಗೆ ಖಾತೆ ಯಾಗಿರಲಿಲ್ಲ, ಅವರುಗಳು ತಪ್ಪಾಗಿ ಖಾತೆ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಾತ ದಾಸಶೆಟ್ಟಿ ಮತ್ತು ಅವರ ಸಹೋದರರು ಖಾತೆ

ಮಾಡಿಕೊಳ್ಳಲಿಲ್ಲ ನಂತರ ನೇರವಾಗಿ ಅವರ ಮೊಮ್ಮಕ್ಕಳು 1964 ರ ಪೂರ್ವದಲ್ಲಿ ಅವರ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಆ ಸಮಯದಲ್ಲಿ ಯಾರ ಹೆಸರಿನಲ್ಲೂ ಖಾತೆ ಇರಲಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಯ ಹೆಸರಿನಲ್ಲಿ ಇರತಕ್ಕಂತಹ ದಿಃ 13.01.1964 ರ ಕ್ರಯ ಪತ್ರವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ ಎಂದರೆ ತಿಳಿದುಕೊಂಡಿರುವುದಿಲ್ಲ. ಸಾಕ್ಷಿಯು ಸ್ವತಃ ಕೆ.ರಾಮಶೆಟ್ಟಿ ಯವರು ದಾಸಶೆಟ್ಟಿಗೆ ಬರೆದುಕೊಟ್ಟ ಕ್ರಯಪತ್ರವನ್ನು ಮಾತ್ರ ಓದಿ ತಿಳಿದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಓದಿ ತಿಳಿದುಕೊಂಡಿರುವ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ತೊಂದರೆ ಇದೆಯಾ ಎಂದರೆ ತೊಂದರೆ ಇರುವುದಿಲ್ಲ. ಕೆ. ರಾಮಶೆಟ್ಟಿ ತನ್ನ ತಂದೆಗೆ ಬಂದಂತಹ ಭಾಗವನ್ನು ಮಾರಾಟ ಮಾಡುತ್ತಿರುತ್ತಾರೆಂದು ಕ್ರಯಪತ್ರದಲ್ಲಿ ನಮೂದು ಆಗಿದೆ ಎಂದರೆ ಸರಿ. ಕೆ. ರಾಮಶೆಟ್ಟಿ ತನ್ನ ತಂದೆಗೆ ಬಂದಂತಹ ಭಾಗವನ್ನು ಮಾರಾಟ ಮಾಡಿದ ಚೆಕ್ ಬಂದಿ ಪೂರ್ವಕ್ಕೆ ಃ ಶ್ಮಶಾನದ ರಸ್ತೆ, ಪಶ್ಚಿಮಕ್ಕೆ ಃ ಎಂ.ಸಿ ರಸ್ತೆ, ಉತ್ತರಕ್ಕೆ ಃ ಇದೇ ನಂಬರ್ ಪೈಕಿ ಮರಿಶೆಟ್ಟಿ ರವರಿಗೆ ಸೇರಿದ ಜಮೀನು, ದಕ್ಷಿಣಕ್ಕೆಃ ನನ್ನ ಬಾಬ್ತು ಜಮೀನು ಎಂದು ನಮೂದಾಗಿದೆ ಎಂದರೆ ಉತ್ತರಕ್ಕೆ ದಾಸಶೆಟ್ಟಿ ಬಿನ್ ಕೆಂಪಶೆಟ್ಟಿ ರವರ ಜಮೀನು ಅಂದರೆ ಅದು ನಮ್ಮ ಜಮೀನು ಎಂದು ಸಾಕ್ಷಿಯು ನುಡಿಯುತ್ತಾರೆ. ದಕ್ಷಿಣಕ್ಕೆಃ ನನ್ನ ಬಾಬ್ತು ಜಮೀನು ಎಂದು ನಮೂದಾಗಿದೆ ಎಂದರೆ ಕೆ. ರಾಮಶೆಟ್ಟಿಯವರು ಅವರ ತಂದೆ ಯ ಭಾಗಕ್ಕೆ ಬಂದ ಜಮೀನಿನಲ್ಲಿ 11 ಗುಂಟೆ ಜಮೀನು ಮಾರಾಟ ಮಾಡಿ ಉಳಿಸಿಕೊಂಡ ಜಮೀನು ಎಂದರೆ ಸಾಕ್ಷಿಯು ಅವರ ತಂದೆಗೆ ಸದರಿ ಜಮೀನು ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ಉತ್ತರಕ್ಕೆ ನನ್ನ ತಂದಗೆ ಸೇರಿದ ಜಮೀನು ಎಂದು ಹೇಳಿದ್ದು ಅದು ಎಷ್ಟು ಗುಂಟೆ ಜಮೀನು ಎಂದರೆ ಸಾಕ್ಷಿಯು ಸರ್ವೆ ನಂಬರ್ 391 ರಲ್ಲಿ 34 ಗುಂಟೆ ಜಮೀನು ಎಂದು ನುಡಿಯುತ್ತಾರೆ. ಉತ್ತರಕ್ಕೆ ನನ್ನ ತಂದೆಗೆ 34 ಗುಂಟೆ ಜಮೀನು ಅಲ್ಲ, 18 ಗುಂಟೆ ಜಮೀನು ಎಂದರೆ ಸರಿಯಲ್ಲ. ಸರ್ವೆನಂಃ 391/1 ರಲ್ಲಿ ನನ್ನ ತಂದೆಗೆ 18 ಗುಂಟೆ ಜಮೀನನ್ನು ದಿಃ 13.01.1964 ರಲ್ಲಿ ಕೆ.ರಾಮಶೆಟ್ಟಿ ಬಿನ್ ಕೆಂಪಶೆಟ್ಟಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

3. ನನ್ನ ತಂದೆಗೆ ಸೇರಿದ ಜಮೀನಿನ ಚೆಕ್ ಬಂದಿ ಪೂರ್ವಕ್ಕೆ ಃ ಶ್ಮಶಾನದ ರಸ್ತೆ, ಪ ಃ ಎಂ.ಸಿ. ರಸ್ತೆ, ಉತ್ತರಕ್ಕೆ ಃ ಪಟೇಲ್ ವೀರಯ್ಯ ರವರ ಜಮೀನು, ದಕ್ಷಿಣಕ್ಕೆಃ ಮರಿಶೆಟ್ಟಿ ರವರ ಜಮೀನು ಸರಿನಾ ಎಂದರೆ ಸರಿ. ಈ ಚೆಕ್ ಬಂದಿಯೊಳಗೆ ಬರುವ ವಿಸ್ತೀರ್ಣ 18 ಗುಂಟೆ ಪೈಕಿ 1 ಗುಂಟೆ ಖರಾಬು ಎಂದರೆ ಸಾಕ್ಷಿಯು ತಪ್ಪು ಎಂದು ನುಡಿಯುತ್ತಾರೆ. ನನ್ನ

ತಂದೆ ಮೇಲೆ ಹೇಳಿದ ಜಮೀನನ್ನು ಕೈ ಸಾಲ ತೀರಿಸಲು ಮತ್ತು ಕೆಂಚಯ್ಯ ರವರ ಮಗ ದೊಡ್ಡಶೆಟ್ಟಿ ರವರ ಸಾಲವನ್ನು ತೀರಿಸಲು 1964 ರಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ವಿಚಾರ ನನಗೆ ಗೊತ್ತಿದ್ದರೂ ಕೂಡ ವಾದಪತ್ರ ಹಾಕುವ ಸಮಯದಲ್ಲಿ ನನ್ನ ವಕೀಲರಿಗೆ ಹೇಳಿರುವುದಿಲ್ಲ ಮತ್ತು ಗೊತ್ತಿರುವುದಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮದ್ದೂರು.